# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಪ್ರವೇಶ ಪರೀಕ್ಷೆ – ೨೦೨೫

ಪ್ರಶ್ನೆಪತ್ರಿಕೆ – ೧

## ಅಕ್ಷರ, ಪದ, ವಾಕ್ಯರಚನೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.**

ಅ) ಕನ್ನಡ ವರ್ಣಮಾಲೆಯನ್ನು ಬರೆದು ವಿವರಿಸಿ. ೧೦

ಆ) ಪದ ಎಂದರೇನು? ಪದಗಳ ವಿವಿಧ ಪದಗಳನ್ನು ಕುರಿತು ಬರೆಯಿರಿ. ೧೦

ಇ) ಒತ್ತಕ್ಷರ ಎಂದರೇನು? ಉದಾಹರಣೆ ಸಹಿತ ವಿವರಿಸಿ. ೧೦

ಈ) ಘ, ಭ, ವ, ನ ಮತ್ತು ಶ– ಈ ಅಕ್ಷರಗಳಿಗೆ ಕಾಗುಣಿತಾಕ್ಷರಗಳನ್ನು ಬರೆಯಿರಿ. ೧೦

ಉ) ಸಂಯುಕ್ತಾಕ್ಷರಗಳು ಎಂದರೇನು? ಅವುಗಳಿಗೆ ಇರುವ ಮತ್ತೊಂದು ಹೆಸರೇನು? ೦೫

ಊ) ವಾಕ್ಯದ ಯಾವುದಾದರು ಎರಡು ಬಗೆಗಳನ್ನು ತಿಳಿಸಿ. ಉದಾಹರಣೆ ಸಹಿತ ವಿವರಿಸಿ. ೦೫

**II ೧. ಐದು ಪದಗಳಿಗೆ ಅರ್ಥ ಬರೆಯಿರಿ.** **೧x೫=೫**

ಅ) ಒಲ್ಲೆ ಆ) ದೊರಕು ಇ) ಕಾಡು ಈ) ಅಕ್ಷಯ

ಉ) ಗಗನ ಊ) ಕುಲಾವಿ ಋ) ಮಡಿ ಎ) ಆಕೆ

ಏ) ಮಡಗು ಐ) ಸರಪಣಿ

**೨. ಐದು ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.** **೨x೫=೧೦**

ಅ) ಜಗಿದು ಆ) ಕಂಡಳು ಇ) ಬೆಕ್ಕು ಈ) ಹುಡುಗ

ಉ) ಕಾಗದ ಊ) ಹನುಮಂತ ಋ) ತಿಂಡಿ ಎ) ನಿರಾಕರಿಸು

ಏ) ಪೆಪ್ಪರಮೆಂಟು ಐ) ಹಕ್ಕಿ

(ಮು.ತಿ.ನೋ.)

ಪ್ರ/೧

**೩. ಯಾವುದಾದರೊಂದು ಪದ್ಯಭಾಗವನ್ನು ಪೂರ್ಣಗೊಳಿಸಿ.** **೧x೫=೫**

ಅ) ಬಾಳೆಯ.......................................................

.......................................................

.......................................................

.......................................................

.......................................................

.......................................................

.......................................................ಮಾಡಿದವು

ಆ) ಅಕ್ಷಯವಾಗಿಹ.......................................................

.......................................................

.......................................................

.......................................................ಕಂದಯ್ಯ!

**III ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.** **೪x೫=೨೦**

ಅ) ಬಾಳೆಹಣ್ಣನು ನೋಡಿದ ಕಪಿಗಳಿಗೆ ಏನಾಯಿತು? ಏನು ಮಾಡಿದವು.

ಆ) ಹನುಮಂತು ಏನನ್ನು ತೊಟ್ಟಿಕೊಂಡಿದ್ದನು?

ಇ) ನಾಯಿಯನ್ನು ನೋಡಿದವರು ಯಾರು? ಏನು ಮಾಡಿದರು.

ಈ) "ಹೌದಣ್ಣಾ" ಎಂದು ಕಪಿಗಳು ಯಾಕೆ ಹೇಳಿದವು?

ಉ) ಅಮ್ಮನ ಮನೆಗೆ ಹೊರಡೆಂದಾಗ ಹನುಮಂತನು ತೋರಿದ ಉತ್ಸಾಹ ಹೇಗಿತ್ತು?

ಊ) ಕಂದನು ಪೆಪ್ಪರಮೆಂಟನ್ನ ನಿರಾಕರಿಸಿರುವುದು ಏಕೆ?

ಋ) ತಾಯಿ ಮಗುವನ್ನು ಏನೆಂದು ಕರೆಯುತ್ತಾಳೆ ವಿವರಿಸಿ.

**IV ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** **೨x೫=೧೦**

ಅ) ಲೇಖನ ಚಿಹ್ನೆಗಳನ್ನು ವಿವರವಾಗಿ ಬರೆಯಿರಿ.

ಆ) ೩೧–೮೦ ರವರೆಗಿನ ಅಂಕಿಗಳನ್ನು ಅಕ್ಷರಗಳಲ್ಲಿ ಬರೆಯಿರಿ.

ಇ) 'ಊಟದ ಆಟ' ಕವನದ ಸಾರಾಂಶವನ್ನು ಬರೆಯಿರಿ.

* * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಪ್ರವೇಶ ಪರೀಕ್ಷೆ – ೨೦೨೫

ಪ್ರಶ್ನೆಪತ್ರಿಕೆ – ೨

## ಭಾಷೆ ಮತ್ತು ಸಾಹಿತ್ಯ ಪರಿಚಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**ಭಾಗ – ೧**

**ಅ. ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **೧x೧೦=೧೦**

೧) ನವಿಲುಕಲ್ಲು ಬೆಟ್ಟ ಹೇಗಿತ್ತು?

೨) ಗುಬ್ಬಕ್ಕನ ಮನೆಗೆ ಬಂದ ಅತಿಥಿಗಳು ಯಾರು?

೩) ಗಾಂಧೀಜಿ ಮಕ್ಕಳಿಗೆ ಜೀವಂತವಾದದ್ದು ಹೇಗೆ?

೪) ಅಂತರಂಗ ಶುದ್ಧಿ ಎಂದರೇನು?

೫) ಸರ್ವಜ್ಞನ ಬಗ್ಗೆ ಬೇಂದ್ರೆಯವರು ಏನು ಹೇಳಿದ್ದಾರೆ?

೬) ಕಾವಿಯನ್ನು ಉಟ್ಟು ತಿರುಗುವವರು ಏನನ್ನು ಬಿಡಲಿಲ್ಲ?

೭) ದುರ್ಯೋಧನನು ಹೊಟ್ಟೆಯ ಕಿಚ್ಚು ಪಡಲು ಕಾರಣವೇನು?

೮) ಕುವೆಂಪು ಅವರ ಸಂದೇಶವೇನು?

೯) ಹುಡುಗನು ಕನಸಿನಲ್ಲಿ ಎಲ್ಲಿಗೆ ಹೋದನು?

೧೦) ಅಜ್ಜಿಯ ಆಸ್ತಿ ಯಾವುದು?

೧೧) ಹರಿಶ್ಚಂದ್ರನ ಕತೆಯನ್ನು ಯಾರು ಯಾರಿಗೆ ಹೇಳಿದರು?

೧೨) ಕುವೆಂಪು ಅವರ ಪೂರ್ಣ ಹೆಸರೇನು?

**ಆ. ಬಿಟ್ಟ ಸ್ಥಳದಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** **೧x೫=೫**

೧) ಶೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ನಾಟಕವನ್ನು ................ ಎಂದು ರೂಪಾಂತರ ಮಾಡಲಾಗಿದೆ. (ರಕ್ತಾಕ್ಷಿ, ಬಿರುಗಾಳಿ)

೨) ಗಾಳಿಯ ಹಾಕಿತು ............ ಹಿಂಡು (ನವಿಲಿನ, ಪ್ರಾಣಿಗಳ)

೩) ತ್ರಿಪದಿ ಕನ್ನಡ ಛಂದಸ್ಸಿನ ............. ( ಗಾಯಿತ್ರಿ, ಜ್ಯೋತಿಷ್ಯ)

(ಪು.ತಿ.ನೋ.)



೪) ಕುವೆಂಪುರವರ .......... ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ (ಶ್ರೀರಾಮಾಯಣ ದರ್ಶನಂ, ಮಲೆಗಳಲ್ಲಿ ಮದುಮಗಳು)

೫) ತೀರ್ಥಹಳ್ಳಿಗೆ ......... ಮೈಲಿಗಳ ದೂರದಲ್ಲಿ ಒಂದು ಬೆಟ್ಟವಿದೆ (ನಾಲ್ಕೈದು, ಒಂದೆರಡು)

**ಇ ಹೊಂದಿಸಿ ಬರೆಯಿರಿ.** **೧x೫=೫**

| | |
|---|---|
| ೧) ಬಸವಣ್ಣ | ೧) ಶಕುನಿ |
| ೨) ದುರ್ಯೋಧನ | ೨) ಕುವೆಂಪು |
| ೩) ಊರೆಲ್ಲ | ೩) ಕೂಡಲಸಂಗಮದೇವ |
| ೪) ರಾಷ್ಟ್ರಕವಿ | ೪) ಇಂಗ್ಲಿಷ್ ಕಾದಂಬರಿಕಾರ |
| ೫) ಆರ್.ಕೆ. ನಾರಾಯಣ | ೫) ನೆಂಟರು |

**ಈ. ಯಾವುದಾದರೂ ಎರಡು ಪದ್ಯಗಳ ಸಾರಾಂಶವನ್ನು ಬರೆಯಿರಿ. ೨x೫=೧೦**

೧. ಕಳಬೇಡ, ಕೊಲಬೇಡ
ಹುಸಿಯ ನುಡಿಯಲು ಬೇಡ, ಮುನಿಯಬೇಡ
ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ!

೨. ಬ್ರಹ್ಮಜ್ಞಾನಿಗಳೆನಿಸುವಿರಲ್ಲ ಹಮ್ಮು ಬಿಡಲಿಲ್ಲ ।
ಸುಮ್ಮನೆ ಯಾಗವ ಮಾಡುವಿರಲ್ಲ ಸುಳ್ಳನು ಬಿಡಲಿಲ್ಲ ॥
ಗಮ್ಮನೆ ಪುರಂದರ ವಿಠಲನ ಪಾದಕೆ
ಹೆಮ್ಮೆ ಬಿಟ್ಟು ನೀವೆರಗಲೆ ಇಲ್ಲ.

೩. ಹಂಸಗಳೆಲ್ಲಾ ಹಾಸಿಗೆ ಮಾಡಿ
ಹಕ್ಕಿಗಳೆಲ್ಲಾ ಹಾಡನು ಹಾಡಿ
ಮೊಲಗಳು ಕತೆಯನು ಹೇಳಿದವು
ನಿಮ್ಮೂರಿನ ಮಳೆ ಬೆಳೆ ಹೇಗೆಂದು
ನರಿಗಳು ಕೇಳಿದವು

**ಉ. ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ.** **೫x೨=೧೦**

೧) ಫ್ಯಾಂಟಸಿ ಪಾರ್ಕ್‌ಗಳು ೨) ರಾಜಂ ೩) ಧರ್ಮರಾಯ
೪) ಪುರಂದರದಾಸ ೫) ತ್ರಿಪದಿ ೬) ಅಪ್ಪ ೭) ಪ್ರಭುಶಂಕರ

(ಪು.ತಿ.ನೋ.)

**ಊ. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ. ೪x೫=೨೦**

೧) ಗುಬ್ಬಕ್ಕನ ದುಃಖಕ್ಕೆ ಕಾರಣವೇನು?

೨) ಬಾಲಕೃಷ್ಣ ಮಾಡಿದ ತಪ್ಪು ಯಾವುದು? ಅವನು ಅದನ್ನು ಹೇಗೆ ತಿದ್ದುಕೊಂಡನು?

೩) ವಚನಗಳಲ್ಲಿ ಹೇಳಿರುವ ನೀತಿ ಯಾವುದು?

೪) ತ್ರಿಪದಿಗಳಲ್ಲಿ ಒಳಗೊಂಡಿರುವ ವಿಷಯಗಳು ಯಾವುವು?

೫) ಸೋಗಿನ ಜ್ಞಾನಿಗಳ ವರ್ತನೆ ಯಾವ ರೀತಿಯದು?

೬) ಕುವೆಂಪು ಅವರ ಬಾಲ್ಯ ಹೇಗೆ ರೂಪುಗೊಂಡಿತು?

೭) ಹಿಂದಿನ ಮೋಜಿನ ತಾಣಗಳು ಹೇಗಿತ್ತು?

## ಭಾಗ – ೨

**ಅ. ಅರ್ಥ ಬರೆಯಿರಿ. ೪x೧=೪**

ತಕಲಿ, ಮೌಢ್ಯ, ಜಳಕ, ವ್ಯಾಧಿ

**ಆ. ನಾನಾರ್ಥಗಳನ್ನು ಬರೆಯಿರಿ. ೪x೧=೪**

ಮುನಿ, ನವ, ಬೇಡ, ತೊರೆ

**ಇ. ಬಿಡಿಸಿ ಬರೆಯಿರಿ. ೪x೧=೪**

ದಾರಿಯಲ್ಲಿ, ಹಿಂಡನಗಲಿದ, ಮಿಂಚಿನುಂಡೆ, ದೇವಾಲಯ

**ಈ. ಸೇರಿಸಿ ಬರೆಯಿರಿ. ೪x೧=೪**

ಗಟ್ಟಿ + ಅನ್ನು ಮನೆ + ಅಲ್ಲಿ

ಹಿರಿದಾದ + ಮರ ಬೆಟ್ಟದ + ತಾವರೆ

**ಉ. ಮೂಲ ರೂಪಗಳನ್ನು ಗುರುತಿಸಿ. ೪x೧=೪**

ಬಣ್ಣ, ಹಕ್ಕಿ, ಪುಸ್ತಕ, ಬ್ರಹ್ಮ

**ಊ. – ಕಾರ, – ವಂತ ಎಂದು ಕೊನೆಯಾಗುವ ಎರಡೆರಡು ಪದಗಳನ್ನು ಬರೆಯಿರಿ. ೪x೧=೪**

(ಪು.ತಿ.ನೋ.)

ಪ್ರ/೨

**ಋ. ಈ ಕ್ರಿಯಾಪದಗಳ ವಚನವನ್ನು ಬದಲಾಯಿಸಿ ಬರೆಯಿರಿ. ೪x೧=೪**

ಹೇಳಿದನು ಹೋದಳು

ಬಿಟ್ಟರು ಬರುತ್ತಿದ್ದಾರೆ

**ೠ. ಸೂಚನೆಗೆ ಅನುಗುಣವಾಗಿ ವಾಕ್ಯರಚನೆ ಮಾಡಿ. ೪x೧=೪**

೧) 'ಅಲ್ಲ' ಎಂದು ಉತ್ತರ ಬರುವಂತೆ ಪ್ರಶ್ನೆಯೊಂದನ್ನು ರೂಪಿಸಿ.

೨) 'ನಾನು ಊರಿಗೆ ಹೋಗುತ್ತೇನೆ'– ಇದನ್ನು ಪ್ರಥಮ ಪುರುಷದಲ್ಲಿ ಬರೆಯಿರಿ.

೩) 'ಬಸ್ಸು ನಮ್ಮ ಊರಿಗೆ ಬಂದಿತು. ತುಂಬ ತಡವಾಗಿತ್ತು'. ಒಂದೇ ವಾಕ್ಯದಲ್ಲಿ ಬರೆಯಿರಿ.

೪) 'ದಾನ ಧರ್ಮ' – ಈ ಪ್ರಕಾರದ ಮತ್ತೊಂದು ಜೋಡಿಪದವನ್ನು ವಾಕ್ಯದಲ್ಲಿ ಬಳಸಿ ಬರೆಯಿರಿ.

**ಎ. ಎರಡು ಪ್ರಶ್ನೆಗಳಿಗೆ ಉತ್ತರಿಸಿ. ೨x೪=೮**

೧) ಲೋಪಸಂಧಿ ಎಂದರೇನು? ಉದಾಹರಣೆ ಸಹಿತ ವಿವರಿಸಿ.

೨) ಕನ್ನಡದಲ್ಲಿ ಎಷ್ಟು ವಚನಗಳಿವೆ? ಅವು ಯಾವುವು? ಉದಾಹರಣೆ ಕೊಡಿ.

೩) ಕರ್ತೃ ಮತ್ತು ಕ್ರಿಯಾ ಪದಗಳಿಗೆ ಇರುವ ಸಂಬಂಧವನ್ನು ಉದಾಹರಣೆಗಳೊಂದಿಗೆ ತಿಳಿಸಿ.

* * *